ರೂಪದಲ್ಲಿರುವ 2001ನೇ ಸಾಲಿನ ರೋರಿಕ್ ಮತ್ತು ದೇವಿಕಾರಾಣಿ ರೋರಿಕ್ ಎಸ್ಟೇಟ್ (ಆರ್ಜನೆ ಮತ್ತು ವರ್ಗಾವಣೆ) (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

(ii) ಕರ್ನಾಟಕ ಅರಣ್ಯ (ತಿದ್ದುಪಡಿ) ವಿಧೇಯಕ, 2001.

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಕೆ.ಹೆಚ್.ರಂಗನಾಥ್(ಅರಣ್ಯ ಸಚಿವರು): ಮಾನ್ಯ ಅಧ್ಯಕ್ಷರೆ, ಕರ್ನಾಟಕ ''ವಿಧಾನಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2001ನೇ ಸಾಲಿನ ಅರಣ್ಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.''

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಕೆ.ಹೆಚ್.ರಂಗನಾಥ್: ಸನ್ಮಾನ್ಯ ಅಧ್ಯಕ್ಷರೆ, 1963ರ ಅರಣ್ಯ ವಿಧೇಯಕಕ್ಕೆ ಇದೊಂದು ಚಿಕ್ಕ ತಿದ್ದುಪಡಿಯಾಗಿರುತ್ತದೆ. ಇದರಲ್ಲಿರುವ ಕೆಲವು ಕ್ಲಾಸ್‌ಗಳಾದ ಸೆಕ್ಷನ್ 2, 83, 84, 85, 86 ಹಾಗೂ 87 ಇವುಗಳಿಗೆ ತಿದ್ದುಪಡಿ ತರಲಾಗಿದೆ. ಇದು ಶ್ರೀಗಂಧಕ್ಕೆ ಸಂಬಂಧಿಸಿದಂತೆ ತಿದ್ದುಪಡಿಯಾಗಿದೆ. ಸದನಕ್ಕೆ ತಿಳಿದಿರುವಂತೆ ಶ್ರೀಗಂಧ ಇದುವರೆವಿಗೂ ಸರ್ಕಾರದ ಆಸ್ತಿಯಾಗಿತ್ತು ಅದನ್ನು ಯಾರೂ ಮುಟ್ಟುವ ಅಧಿಕಾರ ಕೂಡ ಇರುತ್ತಿರಲಿಲ್ಲ, ಸಾರ್ವಜನಿಕರ ಮನೆ ಅಥವಾ ಅಂಗಳದಲ್ಲಿ ಶ್ರೀಗಂಧ ಹುಟ್ಟಿದ್ದರೆ ಅಥವಾ ಬೆಳೆದಿದ್ದರೆ ಅದು ಸರ್ಕಾರದ ಆಸ್ತಿ, ಮಾಲಿಕತ್ವ ಸರ್ಕಾರಕ್ಕೆ ಸೇರಿತ್ತು ಆದರೆ ಈ ತಿದ್ದುಪಡಿಯ ಪ್ರಕಾರ ಯಾರು ಸಾರ್ವಜನಿಕರ ಅಂಗಳ ಅಥವಾ ಮನೆಯಲ್ಲಿ ಶ್ರೀಗಂಧವಿದ್ದರೆ ಅದು ಅವರ ಆಸ್ತಿಯಾಗಿರುತ್ತದೆ, Exclusive property of the Government ಎಂದು ಏನು ಹೇಳುತ್ತೇವೆ ಅದು ಈ ತಿದ್ದುಪಡಿ ಬಂದ ಮೇಲೆ ಬದಲಾವಣೆಯಾಗಿ ಯಾರ ಜಮೀನಿನಲ್ಲಿ ಅದು ಇದೆ, ಅದು ಅವರಿಗೆ ಸೇರತಕ್ಕದ್ದು. ಅದನ್ನು ಕಡಿದು ಮಾರಾಟ ಮಾಡಿದ ಮೇಲೆ ಆ ಮರಕ್ಕೆ ತಗಲುವ ಖರ್ಚು ವೆಚ್ಚವನ್ನು ಮುರಿದುಕೊಂಡು ಬರುವ ಬೆಲೆ ಆ ಮಾಲೀಕನಿಗೆ ಸೇರುತ್ತದೆ. ಅದನ್ನು ಕತ್ತರಿಸಿ ತಂದು ಗಂಧದ ಕೋಠಿಗೆ ಹಾಕಿ ಮಾರಾಟ ಮಾಡತಕ್ಕಂಥ ಜವಾಬ್ದಾರಿ ಸರ್ಕಾರಕ್ಕೆ ಬರುತ್ತದೆ. ಇಷ್ಟು ಪ್ರಮುಖ ಬದಲಾವಣೆಗಳ ಜೊತೆಗೆ ಈ ತಿದ್ದುಪಡಿಯನ್ನು ತರಲಾಗಿದೆ. ಈ ತಿದ್ದುಪಡಿಯನ್ನು ತರಲು ಕಾರಣ ಮಾನ್ಯ ಮುಖ್ಯಮಂತ್ರಿಗಳು ಜನರಿಗಾಗುವ ತೊಂದರೆಯನ್ನು ಪರಿಗಣಿಸಿ ಜೊತೆಗೆ ರಾಜ್ಯದಲ್ಲಿ ಗಂಧದ ಮರದ ಕಳ್ಳಸಾಗಾಣಿಕೆಯಾಗಿ ಮಾರಾಟವೇನಾಗುತ್ತಿದೆ ಅದನ್ನು ತಡೆಗಟ್ಟಬೇಕು, ಅಲ್ಲದೆ ಆ ಮರವನ್ನು ಬೆಳೆಸಿದ ಮಾಲೀಕತ್ವ ಆ ಜಮೀನಿನ ಮಾಲೀಕನಿಗೆ ದೊರೆಯಬೇಕು, ಆತನಿಗೂ ಕೂಡ ಅದರ ಪಾಲು ದೊರೆಯಬೇಕೆನ್ನುವ ವಿಚಾರವನ್ನು ಅವರ ಭಾಷಣದಲ್ಲಿ ಆಯವ್ಯಯ ಪ್ರಸ್ತಾಪ ಮಾಡಿ ಮುಂದಿನ ಅಧಿವೇಶನದಲ್ಲಿ

ಸಂಬಂಧಪಟ್ಟ ತಿದ್ದುಪಡಿಯನ್ನು ತರಲಾಗುವುದೆಂದು ಭರವಸೆಯನ್ನು ಈ ಸದನಕ್ಕೆ ಕೊಟ್ಟಿದ್ದರು. ಆ ಕಾರಣಕ್ಕೋಸ್ಕರ ಈ ತಿದ್ದುಪಡಿಯನ್ನು ತರಲಾಗಿದೆ. ಬಹುಮಟ್ಟಿಗೆ ಇದು ವಾದಗ್ರಸ್ತ ತಿದ್ದುಪಡಿಯಲ್ಲ, ಆದುದರಿಂದ ಸದನದ ಎಲ್ಲಾ ಸದಸ್ಯರು ಏಕ್ಸಾತೀತವಾಗಿ ಈ ವಿಚಾರವನ್ನು ಒಪ್ಪಿಕೊಂಡು ಈ ತಿದ್ದುಪಡಿಗೆ ಅನುಮತಿಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್(ವಿರೋಧಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಈಗ ತಂದಿರುವ ತಿದ್ದುಪಡಿ ಒಳ್ಳೆಯ ತಿದ್ದುಪಡಿಯಾಗಿದೆ. ಸಾರ್ವಜನಿಕವಾಗಿ ಶ್ರೀಗಂಧ ಬೆಳೆಯುವವರಿಗೆ ಒಳ್ಳೆಯ ಅವಕಾಶ ಕೊಡುವುದಾಗಿದೆ, ಇದುವರೆಗೆ ಶ್ರೀಗಂಧ ಕಳ್ಳ ಸಾಗಾಣಿಕೆಯಾಯಿತು, ತಪ್ಪಿತಸ್ಥರನ್ನು ಹಿಡಿಯಬೇಕು, ಈ ಎಲ್ಲಾ ವಿಚಾರಗಳನ್ನು ನೋಡುತ್ತಿದ್ದೇವೆ. ನಾವು ಹೆಚ್ಚು ಕಟ್ಟುಪಾಡು ಮಾಡಿದಷ್ಟೂ ಹೆಚ್ಚು ಅಪರಾಧ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಅದೇ ರೀತಿ ಇಲ್ಲಿ ಕಟ್ಟುಪಾಡು ಹಾಕಿದ್ದಕ್ಕೆ ಶ್ರೀಗಂಧ ಕಳ್ಳಸಾಗಾಣಿಕೆಯೆಲ್ಲಾ ಆಯಿತು. ಇವತ್ತು ಶ್ರೀಗಂಧವನ್ನು ಸಾರ್ವಜನಿಕರು ತಮ್ಮ ಆಸ್ತಿಯಲ್ಲಿ ಬೆಳೆಯಲು ಅವಕಾಶ ಮಾಡಿಕೊಡಲಾಗಿದೆ, ಜೊತೆಗೆ ಅವರಿಗೆ ಮಾಲೀಕತ್ವ ಕೊಡುವ ಈ ತಿದ್ದುಪಡಿ ಬಹಳ ಒಳ್ಳೆಯದೆಂದು ನಾನು ಸ್ವಾಗತ ಮಾಡುತ್ತೇನೆ. ಇದು ದುರುಪಯೋಗವಾಗದಂತೆ ಸ್ವಲ್ಪ ಎಚ್ಚರವಹಿಸುವುದು ಆಗಬೇಕು. ಯಾರು ಮರವನ್ನು ಬೆಳೆದಿದ್ದರೆ ತಕ್ಷಣಕ್ಕೆ ಕಡಿಯುವುದಕ್ಕೆ ಮಾರಾಟ ಮಾಡುವುದಕ್ಕೆ ಅನುಕೂಲವಿದೆಯೋ ಇಲ್ಲವೋ ಎಂಬ ಬಗ್ಗೆ ಸ್ಪಷ್ಟೀಕರಣ ಮಾಡಬೇಕು. ಮರವನ್ನು ಅವರೇ ಕಡಿಯಬೇಕೋ ಅಥವಾ ಸರ್ಕಾರದವರು ಬಂದು ಕಡಿಯಬೇಕೊ ಎನ್ನುವುದರ ಬಗ್ಗೆಯೂ ಕೂಡ ಸ್ವಲ್ಪ ಸ್ಪಷ್ಟೀಕರಣ ಮಾಡಬೇಕು.

ಶ್ರೀ ಬಿ.ಸೋಮಶೇಖರ್(ಮಳವಳ್ಳಿ): ಮಾನ್ಯ ಅಧ್ಯಕ್ಷರೆ, ಇದು ಒಳ್ಳೆಯ ಮಸೂದೆಯಾಗಿದೆ. ಈ ಬಗ್ಗೆ ನಮ್ಮ ವಿಷಯ ಸಮಿತಿಯಲ್ಲೂ ಕೂಡ ದೀರ್ಘವಾಗಿ ಚರ್ಚೆ ಮಾಡಿದ್ದೇವೆ, ಮುಖ್ಯಮಂತ್ರಿಗಳು ಘೋಷಣೆ ಮಾಡಿದ ಮೇಲೆ, ಈ ವಿಷಯದಲ್ಲಿ ನಾವು ಕೂಡ ಶಿಫಾರಸ್ಸು ಮಾಡಿದ ಮೇಲೆ ಮಸೂದೆಯ ರೂಪದಲ್ಲಿ ಸದನಕ್ಕೆ ತರಲಾಗಿದೆ. ಕರ್ನಾಟಕ ರಾಜ್ಯ ಹೆಚ್ಚು ಗಂಧದ ಉತ್ಪತ್ತಿಯಲ್ಲಿ ರಾಷ್ಟ್ರದಲ್ಲೇ ಹೆಸರುವಾಸಿಯಾದ ರಾಜ್ಯವಾಗಿದೆ. ಇದುವರೆಗೆ ಸ್ವಲ್ಪ ಪ್ರಮಾಣದಲ್ಲಿ ಬೆಳೆಯುತ್ತಿದ್ದ ಶ್ರೀಗಂಧವನ್ನು ಕರಕುಶಲ ನಿಗಮ ಹಾಗೂ ಸೋಪ್ ಅಂಡ್ ಡಿಟರ್ಜೆಂಟ್ಸ್ ಸಂಸ್ಥೆಯವರು ಬಹಳ ಸಣ್ಣ ಪ್ರಮಾಣದಲ್ಲಿ ತೆಗೆದುಕೊಳ್ಳುತ್ತಿದ್ದರು. ಇದು ಸಣ್ಣ ಪ್ರಮಾಣದಲ್ಲಿ ನಡೆಯುತ್ತಿತ್ತು. ಆದರೆ, ನಮ್ಮ ರಾಜ್ಯದಲ್ಲಿ ಹವಾಗುಣ ಸೂಕ್ತವಾಗಿದ್ದರೂ ಇದುವರೆಗೆ ಇದರಿಂದ ಹೆಚ್ಚು ಪ್ರಯೋಜನ ಪಡೆಯಲಾಗಲಿಲ್ಲ. ಆದರೆ, ವಿರೋಧಪಕ್ಷದ ನಾಯಕರು ಹೇಳಿದ ಹಾಗೆ, ಎಲ್ಲಿ ರಿಸ್ಟ್ರಿಕ್ಷನ್ಸ್ ಜಾಸ್ತಿ ಇರುತ್ತದೆಯೋ, ಅಲ್ಲಿ ಕಳ್ಳತನ, ಸ್ಮಗ್ಲಿಂಗ್ ಜಾಸ್ತಿ ಇರುತ್ತದೆ. ಆದುದರಿಂದ ಅದರ ಸರಳೀಕರಣವಾದರೆ ಆ ಮಾಲೀಕತ್ವವನ್ನು ಯಾವ ಜಮೀನಿನಲ್ಲಿ, ಯಾವ ರೈತ ಬೆಳೆಯುತ್ತಾನೆಯೋ ಅವನಿಗೇ ಅದರ ಹಕ್ಕು ಸಿಕ್ಕಿದರೆ, ಅವನೇ ಜವಾಬ್ದಾರಿಯಿಂದ ನೋಡಿಕೊಳ್ಳುತ್ತಾನೆ. ಆ ಮರವನ್ನು ಚೆನ್ನಾಗಿ ಬೆಳೆಸುತ್ತಾನೆ. ಆಕ್ಸ್‌ನಲ್ಲಿ

ಸೇರಿಸಿರದಿದ್ದರೂ ರೂಲ್ಸ್‌ನಲ್ಲಾದರೂ, ಮರವನ್ನು ಬೆಳೆದಾಗ ಯಾವ ರೀತಿ ಅದನ್ನು ಕಡಿಯಬೇಕು? ಅದರ ಎಷ್ಟು ಭಾಗ ಸರ್ಕಾರಕ್ಕೆ ಸಲ್ಲಬೇಕು? ಅದರ ಎಷ್ಟು ಭಾಗವನ್ನು ಅವನು ಇಟ್ಟುಕೊಳ್ಳಬಹುದೆಂಬುದನ್ನು ಸೇರಿಸಬೇಕು. ಇನ್ನು 20 ವರ್ಷಗಳಿಗಾದರೂ ಅದು ಮರವಾಗಿ ಬೆಳೆದು, ನಮ್ಮ ಮಕ್ಕಳಾದರೂ ಅದರ ಉಪಯೋಗ ಪಡೆಯಬಹುದು. ರಾಜ್ಯಕ್ಕೆ ಬಹಳ ಸಂಪತ್ತು ಆಗುತ್ತದೆ. ಇದನ್ನು ಹೆಚ್ಚು ಬೆಳೆದಷ್ಟು, ಗಂಧವನ್ನು ಹೊರದೇಶಗಳಿಗೆ ರಫ್ತು ಮಾಡುವ ಅವಕಾಶವಾಗುತ್ತದೆ. ಇದರಿಂದ ನಮ್ಮ ರಾಜ್ಯವು ಸಮೃದ್ಧಿಯಾಗಿ, ಆರ್ಥಿಕವಾಗಿ ಸದೃಢವಾಗುವ ಅವಕಾಶವಿರುತ್ತದೆ. ಇದು ಒಳ್ಳೆಯ ಮಸೂದೆ ಎಂದು ನಾನು ಇದನ್ನು ಸಪೋರ್ಟ್ ಮಾಡುತ್ತೇನೆ.

ಶ್ರೀ ಹೆಚ್.ಎಸ್.ಮಹದೇವಪ್ರಸಾದ್(ಗುಂಡ್ಲುಪೇಟೆ): ಈ ಮಸೂದೆಯನ್ನು ತಂದಿರುವುದು ಸ್ವಾಗತಾರ್ಹವಾದರೂ, ಮರ ದೊಡ್ಡದಾಗಿ ಬೆಳೆದಿರದಿದ್ದರೂ, ಅದನ್ನು ಸ್ಮಗ್ಲರ್ಸ್ ಮೆಷೀನ್‌ನಿಂದ ಬುಡಕ್ಕೆ ಗರಗಸ ಇಟ್ಟು ಒಂದೇ ರಾತ್ರಿಯಲ್ಲಿ 8-10 ಮರಗಳನ್ನು ಕಟ್ ಮಾಡುತ್ತಾರೆ. ಹಿಂದೆ ಒಬ್ಬರು ಮಂತ್ರಿಯಾಗಿದ್ದಾಗ, ಅವರ ಕ್ವಾರ್ಟರ್ಸ್‌ನಲ್ಲೇ ಗಂಧದ ಮರವನ್ನು ಕಳ್ಳತನ ಮಾಡಿದ್ದರು. ಹಿಂದೆ ನಮ್ಮ ತೋಟದಲ್ಲೇ ಗೇಟ್ ಎಂಟ್ರೆನ್ಸ್‌ನಲ್ಲೇ ಗಂಧದ ಮರ ಬೆಳೆದಿದ್ದರೂ, ಬೆಳಿಗ್ಗೆ 6 ಗಂಟೆಗೆ ಜಮೀನಿಗೆ ಹೋಗುವಾಗ ನೋಡುವಷ್ಟರಲ್ಲಿ ಆ ಮರ ಅಲ್ಲಿರುತ್ತಿರಲಿಲ್ಲ, ಹೀಗಾಗುತ್ತದೆ. ಮರದ ಪ್ರಾಪರ್ಟಿ ರೈಟ್ಸ್ ಅನ್ನು ರೈತರಿಗೆ ಕೊಟ್ಟ ಮೇಲೆ, ಅಕಸ್ಮಾತ್ ನಮ್ಮ ಗಮನಕ್ಕೆ ಬಾರದೆ ಅದು ಕಳ್ಳತನವಾಗಲಿ ಅಥವಾ ಯಾರಾದರೂ ಕಡಿದುಕೊಂಡು ಹೋದರೆ ನಾವು ಕಂಪ್ಲೇಂಟ್ ಕೊಡುತ್ತೇವೆ. ಆದರೆ, ನಮ್ಮನ್ನೇ ಗುಮಾನಿಪಡುವ ವ್ಯವಸ್ಥೆಯಾಗುತ್ತದೆ. ಆದುದರಿಂದ, ಅದರ ಬಗ್ಗೆ ಸ್ಪಷ್ಟೀಕರಿಸಬೇಕು. ಏಕೆಂದರೆ, ಇದು ಸಿಪಿಯರ್ ಅಫೆನ್ಸ್ ಆಗುತ್ತದೆ.

ಶ್ರೀ ಕೆ.ಶ್ರೀನಿವಾಸಗೌಡ ಕುದುವನಹಳ್ಳಿ(ಕೋಲಾರ): ಈ ಮಸೂದೆಯನ್ನು ತಂದಿರುವುದು ಸ್ವಾಗತಾರ್ಹ. ಆದರೆ, ಇವತ್ತು ಗಂಧದ ಮರಕ್ಕೆ ಫ್ಯಾಕ್ಟರಿಯಲ್ಲಿ ಕೊಡುವ ರೇಟ್‌ಗೂ, ಕಳ್ಳಸಾಗಾಣಿಕೆಯಲ್ಲಿ ಮಾರುವ ರೇಟ್‌ಗೂ ಅಜಗಜಾಂತರ ವ್ಯತ್ಯಾಸವಿದೆ. ಈ ರೇಟ್‌ನ್ನು ನೀವು ಕೊಡದಿದ್ದರೆ, ರೈತ ಅದನ್ನು ನೋಡಿಕೊಳ್ಳುವುದಿಲ್ಲ. ನನ್ನದೇ ಸ್ವಂತ ಮಾವಿನ ತೋಪಿನಲ್ಲಿ ಬಹಳಷ್ಟು ಗಂಧದ ಮರಗಳಿವೆ. ಈ ಸೈಜ್ ಬರುವವರೆಗೂ ನನಗೂ ಬಹಳ ಸಂತೋಷ. ನಂತರ, ರಾತ್ರೋರಾತ್ರಿ ಅದರ ಪತ್ತೆ ಇರುವುದಿಲ್ಲ. ನನ್ನ ತೋಟದಲ್ಲಿ ಸುಮಾರು 15 ದಿವಸಗಳ ಹಿಂದೆ ನಾಲ್ಕು ಮರಗಳನ್ನು ಕಳ್ಳತನ ಮಾಡಿದ್ದಾರೆ. ಇವತ್ತು ನೀವು ಕೊಡುವ ರೇಟ್ ಹಾಗೂ ಸ್ಮಗ್ಲಿಂಗ್ ರೇಟ್‌ಗೆ ವ್ಯತ್ಯಾಸ ಇಲ್ಲದಿದ್ದರೆ, ಆಗ ಸ್ಮಗ್ಲಿಂಗ್ ಇರುವುದಿಲ್ಲ. ಇದಕ್ಕೆ ನೀವು ಮೊದಲು ಆದ್ಯತೆ ಕೊಡಬೇಕು. ಕಳ್ಳತನಕ್ಕೆ ಸಂಬಂಧಿಸಿದಂತೆ ನೀವೊಂದು ಆಕ್ಟ್ ತರಬೇಕು. 'shoot at sight or shoot at spot' ಆ ಆಕ್ಟ್ ಬಂದರೆ, ಅದರ ಮೇಲೆ ಕಡಿವಾಣ ಹಾಕಬಹುದು. ಇವತ್ತು ಶ್ರೀಗಂಧದ ಮರವಿದೆ ಎಂದು ನಮ್ಮ ಮಕ್ಕಳಿಗೆ ಪುಸ್ತಕಗಳಲ್ಲಿ ತೋರಿಸಬೇಕಾದ

ಪರಿಸ್ಥಿತಿಗೆ ಬಂದಿದ್ದೇವೆ. ನೀವು ಇದಕ್ಕೆ ಹೆಚ್ಚು ಒತ್ತು ಕೊಡಬೇಕು. ಹಿಂದೆ 26-27 ವರ್ಷಗಳ ಹಿಂದೆ ಮಾನ್ಯ ಬೈರೇಗೌಡರ ತೋಟದಲ್ಲಿ ಏಪರೀತ ಗಂಧವಿತ್ತು. ಎಲ್ಲವನ್ನೂ ಸಾಗಾಣಿಕೆ ಮಾಡುವ ಸಮಯದಲ್ಲಿ ಅವರು ನನಗೆ ಹೇಳಿದರು. ನಾನೇ ಅದನ್ನು ಮೈಸೂರಿನ ಫ್ಯಾಕ್ಟರಿಗೆ ತೆಗೆದುಕೊಂಡು ಹೋದಾಗ ಅಂದು ನನಗಾದ ಅನುಭವ ಬೇರ್ಯಾರಿಗೂ ಆಗಬಾರದು. ಅಷ್ಟು ಹಿಂಸೆ. ರೇಟ್ ಅಸೆಸ್ ಮಾಡುವುದಕ್ಕೂ ಅಷ್ಟು ಹಿಂಸೆ, ಅವರು ಇದರಲ್ಲಿ ಗಂಧವೇ ಇಲ್ಲವೆನ್ನುತ್ತಾರೆ. ಬೇರೆ ಕಡೆ ಕೇಳಿದರೆ, ಇದರಲ್ಲಿ ಹೈಕ್ಲಾಸ್ ಗಂಧವಿದೆ ಎನ್ನುತ್ತಾರೆ. ಆ ಫ್ಯಾಕ್ಟರಿಯಲ್ಲಾಗುವ ಹಿಂಸೆಯನ್ನು ನಿಲ್ಲಿಸಬೇಕು. ಕೆಜಿಎಫ್‌ನಲ್ಲಿ ಗಂಧವನ್ನು ಪೋಲೀಸ್ ಸ್ಟೇಷನ್‌ನಲ್ಲಿಟ್ಟಿದ್ದರು, ಅದನ್ನೇ ತೆಗೆದುಕೊಂಡು ಹೋಗಿದ್ದಾರೆ. ಅವರೇ ಅದನ್ನು ತಡೆಯಲಾಗಲಿಲ್ಲ. ಎಸ್‌ಪಿ ಮನೆಯಲ್ಲಿದ್ದರೂ ಕಳ್ಳತನವಾಗುತ್ತದೆ ಇದಕ್ಕೆ ಮುಖ್ಯ ಕಾರಣವೆಂದರೆ ಬೆಲೆಯ ಅಂತರ. ಇದರ ಜೊತೆಗೆ, ಇತ್ತೀಚೆಗೆ ಆಂಧ್ರದಲ್ಲಿ ರಕ್ತ ಸಿಂಧೂರವೆಂಬ ಅಥವಾ ರೆಡ್ ಸ್ಯಾಂಡಲ್ ಎಂಬ ಮರ ಬಹಳ ವೇಗವಾಗಿ ಬೆಳೆಯುತ್ತಾರೆ. ಅದಕ್ಕೆ ಗಂಧಕ್ಕಿಂತ ಹೆಚ್ಚು ರೇಟ್ ಇದೆ ಎಂದು ನಾನು ಕೇಳಿದ್ದೇನೆ. ಅದಕ್ಕೆ ಅಷ್ಟು ಒತ್ತು ಕೊಡುವುದು ಒಳ್ಳೆಯದೆಂದು ನಾನು ಹೇಳುತ್ತೇನೆ. ಈ ಆಕ್ಟ್ ತರದಿದ್ದರೆ, ವೀರಪ್ಪನ್‌ನಂಥವರು ಇನ್ನೂ ಹತ್ತಾರು ಜನ ಬೆಳೆಯುತ್ತಾರೆ. ಅವರ್ಯಾರನ್ನೂ ನಾವು ಹಿಡಿಯಲೂ ಆಗುವುದಿಲ್ಲ. ಹಾಗೂ ಹಿಡಿದೂ ಇಲ್ಲ. ರೇಟ್ ಪ್ಯಾರಿಟಿಯನ್ನು ಈಕ್ವಲ್ ಮಾಡಿದಾಗ ಎಲ್ಲಾ ಸರಿಹೋಗುತ್ತದೆಂಬ ಭಾವನೆಯನ್ನು ವ್ಯಕ್ತಪಡಿಸುತ್ತಾ ಈ ಮಸೂದೆಯನ್ನು ನಾನು ಸ್ವಾಗತಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ.ಹೆಚ್.ರಂಗನಾಥ್: ಮಾನ್ಯ ಸದಸ್ಯರು ಮಸೂದೆಯನ್ನು ಸ್ವಾಗತಿಸಿದ್ದಕ್ಕೆ ನಾನು ಅವರಿಗೆ ನನ್ನ ವಂದನೆಗಳನ್ನ ಸಲ್ಲಿಸುತ್ತಿದ್ದೇನೆ. ರೇಟ್ ಪ್ಯಾರಿಟಿ ಪ್ರಶ್ನೆ ಇಲ್ಲಿಲ್ಲ. ಹರಾಜಿನಲ್ಲಿ ಏನು ಪೂರ್ಣ ಬೆಲೆ ಬರುತ್ತದೆ, ಅದು ಮಾಲೀಕರಿಗೆ ಸಲ್ಲುತ್ತದೆ.

ಶ್ರೀ ಕೆ.ಶ್ರೀನಿವಾಸಗೌಡ(ಕುದುವನಹಳ್ಳಿ): ನೀವು ಕೊಡುವ ಫ್ಯಾಕ್ಟರಿ ಬೆಲೆ ಮತ್ತು ಇವತ್ತು ಬೇರೆ ಮಾರ್ಕೆಟ್ ಬೆಲೆಗೂ 10ರೂ.ನಿಂದ 90ರೂ.ವರೆಗೂ ಅಂತರವಿದೆ. ಆದ್ದರಿಂದಲೇ ಕಳ್ಳತನವಾಗುವುದೆಂದು ನಾನು ಹೇಳಿದ್ದು.

ಶ್ರೀ ಕೆ.ಹೆಚ್.ರಂಗನಾಥ್: ಮಾನ್ಯ ಸದ್ಯರಿಗೆ I think I might not have made myself quite clear. ಈ ಆಕ್ಟ್‌ನಲ್ಲಿ ಅದನ್ನು ಕಟಾವು ಮಾಡಿಕೊಂಡು ಕೋಠಿಗೆ ತಂದು ಹರಾಜು ಮಾಡಿಸಿ ಹರಾಜಿನಲ್ಲೇನು ಬೆಲೆ ಬರುತ್ತದೆ, ಆ ಪೂರ್ಣ ಬೆಲೆಯನ್ನು ಮಾಲೀಕರಿಗೆ ಕೊಡುತ್ತೇವೆ. ಟ್ರಾನ್ಸ್‌ಪೋರ್ಟ್ ಖರ್ಚನ್ನು ಮಾತ್ರ ನಾವು ಇಟ್ಟುಕೊಳ್ಳುತ್ತೇವೆ. ಇಲಾಖೆಯವರು ರೇಟ್ ಪ್ಯಾರಿಟಿ ಫಿಕ್ಸ್ ಮಾಡುವ ಪ್ರಶ್ನೆ ಇಲ್ಲ. ಅದನ್ನು ಮಾರಾಟ ಮಾಡಲು ರೆಗ್ಯುಲೇಷನ್ಸ್ ಏನಿವೆ ಅದನ್ನು ಮಾಡಿಕೊಳ್ಳುವುದಿದೆ. ಯಾವ ರೀತಿ ಕೂಡ ಅದರ ಬಗ್ಗೆ ಅನುಮಾನ ಪಡಬೇಕಾಗಿಲ್ಲ. ಯಾರಾದರೂ ಅದನ್ನು ಕಡಿದರೆ, ಕಳ್ಳತನ ಮಾಡಿದರೆ ಹೇಗೆಂದು

ಕೇಳಿದರು. ಅವನು ಹತ್ತಿರದಲ್ಲಿನ ಫಾರೆಸ್ಟ್ ಆಫೀಸಿಗೆ ಅದನ್ನು ತಿಳಿಸಬೇಕು. ಮಾಲೀಕತ್ವ ತಮಗೇ ಸೇರಿರುವುದರಿಂದ ಅದನ್ನು ರಕ್ಷಣೆ ಮಾಡುವ ಜವಾಬ್ದಾರಿ ತಮ್ಮದಾಗಿರುತ್ತದೆ. ಕಳೆದುಕೊಂಡಾಗ, ಅದರಿಂದ ಬರುವ ಬೆಲೆ ತಮಗೆ ಸಿಗುವುದಿಲ್ಲ. ನಮ್ಮ ಬೆಲೆಗೂ, ಹರಾಜಿನಲ್ಲಿ ಬರುವ ಬೆಲೆಗೂ ರೈತರಿಗೆ ಕಡಿಮೆ ದೊರೆಯುವುದರಿಂದ ಸ್ಮಗ್ಲಿಂಗ್‌ಗೆ ಅವಕಾಶವಾಗುತ್ತದೆ. ಆದುದರಿಂದ, ಈ ಪ್ರಶ್ನೆ ಬರುವುದಿಲ್ಲ. ಪೂರ್ಣ ಮಾಲೀಕತ್ವ ಅವನಿಗೇ ಬಂದು ಪೂರ್ಣ ಬೆಲೆ ಅವನಿಗೆ ಬಂದರೆ ಸ್ಮಗ್ಲಿಂಗ್ ಏಕೆ ಆಗುತ್ತದೆ? ಸ್ಮಗ್ಲಿಂಗ್ ಎಲ್ಲಿ ಆಗಬಹುದೆಂದರೆ, ನಮ್ಮಲ್ಲಿ ಇನ್ನೂ ಕೂಡ ಅರಣ್ಯದಲ್ಲಿ ಇದು ಇದೆ. ಅದನ್ನು ರಕ್ಷಿಸುವುದಕ್ಕೋಸ್ಕರ ನಾವು ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಬಹುಮಟ್ಟಿಗೆ ಅಲ್ಲಿಂದ ತೆಗೆದುಕೊಂಡು ಬಂದು, ಇನ್ಯಾರದೋ ಎಂದು ಹೇಳಿ ಮಾರಲು ಪ್ರಯತ್ನಿಸಬಹುದು. ರಂಗೋಲಿ ಕೆಳಗೆ ನುಸುಳುವವರೂ ಇದ್ದಾರೆ. ನಮ್ಮಲ್ಲಿರುವ ಮರವನ್ನು ರಕ್ಷಣೆ ಮಾಡುವ ಜವಾಬ್ದಾರಿ ನಮ್ಮ ಇಲಾಖೆ ಮೇಲಿರುತ್ತದೆ. ಅದನ್ನು ರಕ್ಷಿಸುವ ಜವಾಬ್ದಾರಿ ಅವರ ಮೇಲೆಯೇ ಇರುತ್ತದೆ. ಪೂರ್ಣ ಫಲ ಅವರಿಗೇ ದೊರೆಯುವುದರಿಂದ ಬಹುಮಟ್ಟಿಗೆ ಅದಕ್ಕೆ ಆಸಕ್ತಿ ತೋರಿಸುತ್ತಾರೆಂದು ತಿಳಿದಿದ್ದೇನೆ. ಅಂಥ ಒಂದು ಆತಂಕಕ್ಕೆ ಅವಕಾಶವಿಲ್ಲವೆಂದು ನಾನು ಹೇಳುತ್ತೇನೆ. ಇದು ಜಾರಿಗೆ ಬಂದ ಮೇಲೆ, ಇದರ ಸಾಧಕ-ಬಾಧಕಗಳನ್ನು ಚಿಂತಿಸಿ, ಮತ್ತೇನಾದರೂ ತಿದ್ದುಪಡಿಯ ಅವಶ್ಯಕತೆ ಇದ್ದರೆ ಅದನ್ನು ತರುವುದಕ್ಕೆ ಸರ್ಕಾರ ಪ್ರಯತ್ನಿಸುತ್ತದೆ.

ಶ್ರೀ ಕೆ.ಜಯಪ್ರಕಾಶ್ ಹೆಗಡೆ: ನೀವು ಅದನ್ನು ಡಿಪೋಗೆ ಸಾಗಿಸಿ ಅಲ್ಲಿ ಹರಾಜು ಮಾಡುವುದಕ್ಕಿಂತ, ಬೇರೆ ಮರಗಳಿಗೆ ಹೇಗೆ ಪರ್ಮಿಟ್ ಕೊಡುತ್ತೀರಿ, ಅದೇ ರೀತಿ ಕೊಟ್ಟರೆ, ರೈತ ನೇರವಾಗಿ ಮಾರಾಟ ಮಾಡಲು ತೊಂದರೆ ಇದೆಯೇ?

ಶ್ರೀ ಕೆ.ಹೆಚ್.ರಂಗನಾಥ್: ಇವತ್ತೂ ಕೂಡ ರೋಸ್‌ವುಡ್ ಮಾಲೀಕರಿಗೇ ಸೇರಿದೆ. sandal is a parasitic plant ಎಲ್ಲಾಕಡೆಗೂ ಇದನ್ನು ಬೆಳೆಯಲು ಸಾಧ್ಯವಾಗುವುದಿಲ್ಲ. ಯಾವ ಭೂಮಿ, ಯಾವ ಹವಾಗುಣದಲ್ಲಿ ಇದನ್ನು ಬೆಳೆಯಲು ಸಾಧ್ಯವೋ, ಅಲ್ಲಿ ಇದನ್ನು ಬೆಳೆಯುತ್ತಾರೆ. ರೋಸ್‌ವುಡ್ ಪ್ಲಾಂಟೇಷನ್ ಇದ್ದರೆ, ಕಟಾವು ಮಾಡಿ ಸರ್ಕಾರ ತೆಗೆದುಕೊಂಡು ಬಂದು ಹರಾಜಿಗೆ ಕೊಡುತ್ತಿದೆ. ಅದನ್ನೇ ನಾವು ಅನುಸರಿಸುತ್ತೇವೆ. ಆದುದರಿಂದ, ಯಾವ ರೀತಿಯಲ್ಲೂ ತೊಂದರೆಯಾಗಲಾರದೆಂಬುದು ನನ್ನ ಭಾವನೆ. ಒಂದು ವೇಳೆ ಏನಾದರೂ ತೊಂದರೆಯಾದರೆ, ಆ ವಿಚಾರವನ್ನು ಸರ್ಕಾರದ ಗಮನಕ್ಕೆ ತಂದರೆ, ತೀಕ್ಷ್ರವಾಗಿ ಅದಕ್ಕೆ ತಿದ್ದುಪಡಿ ತಂದು ಪೂರ್ಣ ಪ್ರಮಾಣದಲ್ಲಿ ಮಾಲೀಕರಿಗೆ ಫಲ ದೊರೆಯಲು ಏನು ಮಾಡಬೇಕೋ ಅದನ್ನು ನಾವು ಮಾಡುತ್ತೇವೆ.

ಶ್ರೀ ಎಸ್.ಸುರೇಶ್‌ಕುಮಾರ್(ರಾಜಾಜಿನಗರ): ಕೆಎಸ್‌ಡಿಎಲ್ ಕಾರ್ಖಾನೆ ಆವರಣದಲ್ಲಿ ಗಂಧದ ಮರ ಬೆಳೆದಿದ್ದು, ಅದನ್ನು ಸರ್ಕಾರದವರು ಕಟ್ ಮಾಡಿಕೊಂಡು ಹೋದರು. ಅಲ್ಲಿ ಸಾಕಷ್ಟು ವರ್ಷಗಳಿಂದ ಅದರ ಬುಡವನ್ನು ಹಾಗೆಯೇ ಬಿಟ್ಟಿದ್ದಾರೆ. ಅವರು ಅದನ್ನು

ಉಪಯೋಗಿಸಲು ಅನುಮತಿ ಕೊಡಿ ಎನ್ನುತ್ತಿದ್ದಾರೆ. ಅದರ ಬಗ್ಗೆ ಯೋಚಿಸಿ. ರಾಜ್ಯದ ಅನೇಕ ಕಡೆ ಪೋಲೀಸರು ಸ್ಮಗ್ಲಿಂಗ್ ಮಾಡುತ್ತಿದ್ದ ಗಂಧದ ಮರವನ್ನು ಹಿಡಿದು ಅದು ಪೋಲೀಸ್ ಸ್ಟೇಷನ್, ಕೋರ್ಟ್‌ಗಳಲ್ಲೇ ಕೊಳೆಯುತ್ತಿದೆ. ಅದನ್ನೇನಾದರೂ ಬೇಗ ಇತ್ಯರ್ಥಪಡಿಸಿದರೆ, ಅದರಿಂದ ಉಪಯೋಗವಾಗುತ್ತದೆ. ಅದರ ಬಗ್ಗೆ ಸರ್ಕಾರ ಚಿಂತಿಸಬೇಕು.

ಶ್ರೀ ಎಸ್.ಎಸ್.ಪಾಟೀಲ್: ಗಂಧದ ಮರವನ್ನು ಎಲ್ಲಾ ಕಡೆಯಲ್ಲೂ ಬೆಳೆಯುತ್ತಾರೆ. ಮುಂಡರಗಿಯಲ್ಲಿ ನಮ್ಮ ಹೊಲದಲ್ಲಿ ಬೀಜ ಹಾಕುವ ಮೊದಲೇ ನಾವು ಎರಡು ಗಂಧದ ಮರ ಹಾಕಿದ್ದೆವು. ಪಕ್ಷಿಗಳು ತಿಂದು ಏನು ಹಾಕುತ್ತವೆ ಅದರಿಂದಲೇ ನಮ್ಮಲ್ಲಿ ಮರಗಳು ಬೆಳೆದಿವೆ. ನಾವು ಅದನ್ನು ರಿಸ್ಟ್ರಿಕ್ಷನ್ ಮಾಡುವುದರಿಂದ, ಮತ್ತಷ್ಟು ಕಳ್ಳತನಗಳಾಗುತ್ತವೆ. ತಾವು ಒಳ್ಳೆಯ ಬಿಲ್ ಮಂಡಿಸಿದ್ದೀರಿ. ರೈತರಿಗೆ ಪರ್ಮಿಷನ್ ಕೊಟ್ಟು ಮಾಡುವುದು ಬೇಡ, ಇಂಥ ಸ್ಥಳದಲ್ಲಿ ಮಾರುತ್ತೇವೆಂದು ತಿಳಿಸಿದರೆ, ಮಾರಲು ಏನಾದರೂ ವ್ಯವಸ್ಥೆ ಮಾಡಿ.

ಶ್ರೀ ಕೆ.ಹೆಚ್.ರಂಗನಾಥ್: ಈ ವಿಚಾರ ಈ ತಿದ್ದುಪಡಿ ತರುವ ಮುಂಚೆಯೇ ನನ್ನ ಗಮನಕ್ಕೆ ಬಂದಿತ್ತು. ಆದರೆ, ತತ್‌ಕ್ಷಣವೇ ತೀರ್ಮಾನ ತೆಗೆದುಕೊಳ್ಳುವುದು ಸರಿಯಾಗಲಾರದು. ಖಾಸಗಿ ಜಮೀನಿನಲ್ಲೋ, ಮನೆಯೊಳಗೋ ಬೆಳೆಯುವುದಕ್ಕಿಂತ ಹೆಚ್ಚು ಪ್ರಮಾಣದಲ್ಲಿ ಸರ್ಕಾರದ ವತಿಯಿಂದಲೇ ಬೆಳೆಯಲಾಗುತ್ತದೆ. ಅದರ ದುರುಪಯೋಗವಾಗುತ್ತದೆನ್ನುವ ಪರಿಸ್ಥಿತಿ ಇರುವುದರಿಂದ, ತತ್‌ಕ್ಷಣವೇ ಅವನಿಗೆ ಮಾರು ಎಂದರೆ ಎಲ್ಲವನ್ನೂ ಪಾಟೀಲರದ್ದು ಎಂದು ಹೇಳಿ, ದುರುಪಯೋಗ ಮಾಡುವ ಸಾಧ್ಯತೆ ಇದೆ. ಸದ್ಯಕ್ಕೆ ಈ ತಿದ್ದುಪಡಿಗೆ ನಾವು ಅವಕಾಶ ಕೊಡೋಣ. ಮುಂದೆ ತಿದ್ದುಪಡಿ ತರುವ ಅವಶ್ಯಕತೆ ಇದ್ದರೆ ಆ ಬಗ್ಗೆ ವಿಚಾರ ಮಾಡೋಣ. ಎಲ್ಲಾ ತಾಲ್ಲೂಕಿನಲ್ಲೂ ಇದು ಬೆಳೆಯುವುದಿಲ್ಲ. ನಮ್ಮ ಚಿತ್ರದುರ್ಗದಲ್ಲೂ ಬೆಳೆಯುತ್ತಾರೆ. ಕೋರ್ಟುಗಳಲ್ಲಿ ಬಹಳ ದೊಡ್ಡ ಪ್ರಮಾಣದ ಶ್ರೀಗಂಧವಿದೆ. ಕೋರ್ಟಿನ ತೀರ್ಮಾನ ಬರುವವರೆಗೂ ನಾವು ಅದನ್ನೇನೂ ಮಾಡಲು ಸಾಧ್ಯವಿಲ್ಲ. ಇತ್ತೀಚೆಗೆ ಯಾರಾದರೂ ಸ್ಯಾಂಪಲ್ ಅನ್ನು ಕೋರ್ಟಿಗೆ ತೋರಿಸಿ ತೆಗೆದುಕೊಂಡು ಬರಬಹುದೆಂದು ತೀರ್ಮಾನವಾಗಿದೆ. ಆದರೆ, ಅದಿನ್ನೂ ಖಚಿತವಾಗಿ ತೀರ್ಮಾನವಾಗದೇ ಇರುವುದರಿಂದ, ಬಹಳ ದೊಡ್ಡ ಪ್ರಮಾಣದಲ್ಲಿ ಕೋರ್ಟುಗಳಲ್ಲಿಯೇ ಉಳಿದಿದೆ. ಸಾಬೂನು ಫ್ಯಾಕ್ಟರಿಗಳಿಗೆ ನಾವು ಬಹಳ ಸಹಾಯ ಮಾಡುತ್ತೇವೆ. ಆದರೆ, ನಾವು ಕೊಟ್ಟಮೇಲೆ ಅವರು ಹಣ ಕೊಡುವುದಿಲ್ಲ. ನಮಗೇ ಸಮಯ ತೆಗೆದುಕೊಳ್ಳುವ ಪರಿಸ್ಥಿತಿ ಬಂದಿದೆ. ಆದರೆ, ಅದನ್ನು ನಾವು ನಿಲ್ಲಿಸುವ ಹಾಗೂ ಇಲ್ಲ, ಬಿಡುವ ಹಾಗೂ ಇಲ್ಲ. ಅದನ್ನೆಲ್ಲಾ ಸಾಬೂನು ಫ್ಯಾಕ್ಟರಿಗೆ ಕೊಡಬೇಕೆಂಬುದು ನನ್ನ ಮನಸ್ಸಿನಲ್ಲಿದೆ. ಅದು ಇವತ್ತು ಗಂಧದ ಫ್ಯಾಕ್ಟರಿಗೆ ಬೇಕಾಗುತ್ತದೆ.

ಶ್ರೀ ಕೆ.ಶ್ರೀನಿವಾಸಗೌಡ(ಕುದುವನಹಳ್ಳಿ): ಗಂಧದ ಕಳ್ಳತನ ಹೇಗಿದೆ ಎಂದರೆ, ಅದು ಫಾರೆಸ್ಟ್ ಇಲಾಖೆಯವರಿಗೂ ಗೊತ್ತಿದೆ. ಕಟ್ಟಿಗೇನಹಳ್ಳಿ, ಬಯಲು ನರಸಾಪುರ, ಬೆಂಗಳೂರು ಜಿಲ್ಲೆ ಮತ್ತು ಕೋಲಾರ ಜಿಲ್ಲೆಗಳಲ್ಲಿ ಕಳ್ಳತನ ಮಾಡುತ್ತಾರೆಂಬುದು ಎಲ್ಲರಿಗೂ ಗೊತ್ತಿದೆ.

ಆದರೆ, ಇಲ್ಲಿಯವರೆಗೂ ಯಾರನ್ನೂ ಅರೆಸ್ಟ್ ಮಾಡಿಲ್ಲ, ಕೇಸ್ ಹಾಕಿಲ್ಲ, ಶಿಕ್ಷೆಗೆ ಗುರಿಪಡಿಸಿಲ್ಲ. ಏಕೆ ಮಾಡಿಲ್ಲ? ಅರಣ್ಯ ಇಲಾಖೆಯವರು ಇದರಲ್ಲಿ ಶಾಮೀಲಾಗಿದ್ದಾರೆಯೇ, ಹೇಗೆಂಬುದನ್ನು ತಿಳಿಸಬೇಕು.

ಶ್ರೀ ಕೆ.ಹೆಚ್.ರಂಗನಾಥ್: ಹಳೆಯದನ್ನು ಮಾತನಾಡುವುದು ಬೇಡ. ಮುಂದಿನ ವಿಚಾರ ಮಾಡೋಣ. ನಾನೆಲ್ಲಾ ಬಿಡಿಸಿ ಏಕೆ ಹೇಳಲಿ? ಯಾರ್ಯಾರು ಅದಕ್ಕೆ ಸಹಕಾರ ಕೊಡುತ್ತಿದ್ದಾರೆ, ಯಾರ್ಯಾರು ಏನು ಮಾಡುತ್ತಿದ್ದಾರೋ, ಇಲ್ಲಿಂದ ಮಾತನಾಡುತ್ತಾ ಹೋದರೆ, ವೀರಪ್ಪನ್‌ವರೆಗೂ ಹೋಗುತ್ತದೆ. ಅವನ ಬಗ್ಗೆ ಪ್ರಸ್ತಾಪಿಸಿದರೆ ಇನ್ನೇನೋ ಎಲ್ಲಿಯೋ ಹೋಗುತ್ತದೆ.

ಶ್ರೀ ಕೆ.ಎಂ.ಇಬ್ರಾಹಿಂ(ಪಿಟ್ಲ): ಗಂಧದ ಸ್ಮಗ್ಲಿಂಗ್ ಆಗುವುದಕ್ಕೆ ಮುಖ್ಯ ಕಾರಣ, ರಾಜ್ಯದ ಬಾರ್ಡರ್‌ನಲ್ಲಿ, ಕೇರಳ ಮತ್ತು ಮಹಾರಾಷ್ಟ್ರಗಳಲ್ಲಿ ಬಹಳಷ್ಟು ಸ್ವಂತ ಫ್ಯಾಕ್ಟರಿಗಳಿದ್ದು, ನಮ್ಮ ಸರ್ಕಾರ ಇಲ್ಲಿಂದಲೇ ಆ ಸರ್ಕಾರಗಳಿಗೆ ಮನವಿ ಮಾಡಿ ಆ ಫ್ಯಾಕ್ಟರಿಗಳನ್ನು ಬಂದ್ ಮಾಡಲು ಕ್ರಮ ಕೈಗೊಳ್ಳಬೇಕು. ಎರಡನೆಯದಾಗಿ, ಫಾರೆಸ್ಟ್ ಇಲಾಖೆಗೆ ಕಾಗದ ಬರೆದು, ನಮ್ಮಲ್ಲಿ ಗಂಧದ ಮರವಿದೆ, ತೆಗೆದುಕೊಂಡು ಹೋಗಿ ಎಂದರೆ, ಎರಡು ವರ್ಷಗಳಾದರೂ ಆ ಕಡೆ ಬರುವುದೇ ಇಲ್ಲ. ಕೊನೆಗೆ ನಾವು ಅರ್ಜಿ ಹಾಕಿದ ನಂತರ ಮೂರು ತಿಂಗಳೊಳಗೆ ತೆಗೆದುಕೊಂಡು ಹೋಗಲೇಬೇಕೆಂಬ ತಿದ್ದುಪಡಿಯನ್ನು ತರಬೇಕು. ಹರಾಜು ಮಾಡುವಾಗ ಕೇವಲ 2-3 ಫ್ಯಾಕ್ಟರಿಗಳಿಗೆ ಮಾತ್ರ ತಿಳಿಸುತ್ತಾರೆ. ಅದಾಗಬಾರದು. ರಾಜ್ಯಮಟ್ಟದ ಪತ್ರಿಕೆಯಲ್ಲಿಯೂ ಬರಬೇಕು, ಹರಾಜಾಗುವ ಸ್ಥಳದಲ್ಲಿ ವಲಯಾಧಿಕಾರಿಗಳ ಕಛೇರಿಯ ನೋಟೀಸ್ ಬೋರ್ಡಿನಲ್ಲೂ ಪ್ರಕಟಿಸಬೇಕೆಂದು ಸಲಹೆ ಮಾಡುತ್ತೇನೆ.

ಶ್ರೀ ಕೆ.ಹೆಚ್.ರಂಗನಾಥ್: ಮಾನ್ಯ ಸದಸ್ಯರ ಅಭಿಪ್ರಾಯವೇನಿದೆ ಅದನ್ನು ಗಮನದಲ್ಲಿಟ್ಟುಕೊಂಡು ರೂಲ್ಸ್‌ನಲ್ಲಿ ಯಾವ ರೀತಿ ಬದಲಾಯಿಸಬೇಕೋ ಅದನ್ನು ಮಾಡಲು ಪ್ರಯತ್ನಿಸುತ್ತೇನೆ.

ಶ್ರೀ ಹೆಚ್.ಎಂ.ಚಂದ್ರಶೇಖರಪ್ಪ(ಶಿವಮೊಗ್ಗ): ತಿದ್ದುಪಡಿ ಮಸೂದೆಯನ್ನು ನಾನು ಸ್ವಾಗತಿಸುತ್ತೇನೆ. ಶಿವಮೊಗ್ಗದಲ್ಲಿ ಬಹಳ ಉತ್ತಮವಾದ ಗಂಧದೆಣ್ಣೆ ಕಾರ್ಖಾನೆ ಇದೆ. ಅದರ ಪಕ್ಕದಲ್ಲಿ ಕನ್ಸರ್‌ವೇಟರ್‌ರವರ ಆಫೀಸ್ ಇದೆ. ಇದು ಮಂತ್ರಿಗಳಿಗೂ ಗೊತ್ತಿದೆ. ಅಲ್ಲಿರುವ ಗಂಧದ ಮರವನ್ನು ಪಕ್ಕದ ಗಂಧದೆಣ್ಣೆ ಕಾರ್ಖಾನೆಗೆ ಕೊಟ್ಟರೆ, ಉತ್ತಮ ಗಂಧದೆಣ್ಣೆ ನಮ್ಮ ರಾಜ್ಯಕ್ಕೆ ಬರುತ್ತದೆ. ಈಗಾಗಲೇ ಬಾಯ್ಲರ್, ಮೆಷಿನರಿ ಹಾಳಾಗುತ್ತಿವೆ. ಅಂಥ ಒಂದು ಇಂಡಸ್ಟ್ರೀ ಹಾಳಾಗಬಾರದು. ಮಲೆನಾಡು ಪ್ರಾಂತ್ಯದ ಹೆಸರುವಾಸಿಯಾದ ಗಂಧದೆಣ್ಣೆ ಕಾರ್ಖಾನೆಯದು. ಅದನ್ನು ಉಳಿಸಿಕೊಳ್ಳಬೇಕು. ಅವರು ಜಿಲ್ಲಾ ಮಂತ್ರಿಗಳಾಗಿ ಕೆಲಸ ಮಾಡಿದ ಅನುಭವವಿರುವವರು. ಗಂಧದೆಣ್ಣೆ ಬಹಳ ಪವಿತ್ರವಾಗಿರುತ್ತದೆ. ಅದನ್ನು ಎಲ್ಲರೂ ಹೋಗಿ

ನೋಡುತ್ತಿದ್ದಾರೆ. ಈಗ ಅಲ್ಲಿ ಊದುಬತ್ತಿ ಉಜ್ಜುವ ಕೆಲಸ ಮಾಡುತ್ತಿದ್ದಾರೆ, ಅದಾಗಬಾರದು. ಗಂಧದ ಮರ ತೆಗೆದುಕೊಂಡು ಬಂದ ಕಾರುಗಳನ್ನು ಎಷ್ಟು ವರ್ಷಗಳಾದರೂ ಡಿಸ್‌ಪೋಸ್ ಮಾಡುವುದಿಲ್ಲ. ಅದಕ್ಕೊಂದು ಅಮೆಂಡ್‌ಮೆಂಟ್ ತಂದು ಡಿಸ್‌ಪೋಸ್ ಮಾಡಿದರೆ ಆ ಕಾರುಗಳು ಸರ್ಕಾರಕ್ಕೆ ವಾಪಸ್ಸು ಬರುತ್ತದೆ ಅಥವಾ ಯಾರಾದರೂ ಅದನ್ನು ಕೊಂಡುಕೊಳ್ಳಲಿ.

ಶ್ರೀ ಕೆ.ಹೆಚ್.ರಂಗನಾಥ್: ನಾನು ಆಗಲೇ ಹೇಳಿದ ಹಾಗೆ, ಇದಕ್ಕೆ ಸಂಬಂಧಪಟ್ಟಂತೆ ಸುಮಾರು ತೊಂದರೆಗಳಿವೆ. ಅದನ್ನೆಲ್ಲಾ ಗಮನಿಸಿ, ತೊಂದರೆಯಾಗದ ಹಾಗೆ ಮತ್ತು ಕೋರ್ಟ್‌ನಲ್ಲಿರುವ, ಅಧಿಕಾರಿಗಳ ಹತ್ತಿರವಿರುವ ಗಂಧದ ಮರಗಳ ಬಗ್ಗೆ, ತೀರ್ಮಾನಿಸಲು ಪ್ರಯತ್ನಿಸುತ್ತೇನೆ. ಅಲ್ಲದೆ, ಡಿಎಫ್‌ಒ ಕೂಡ ಕೆಲವು ಕೇಸಸ್ ಬಗ್ಗೆ ತೀರ್ಮಾನ ಮಾಡುವುದಿದೆ. ಶೀಘ್ರವಾಗಿ ಅದು ಏಲೇವಾರಿಯಾಗುವುದಕ್ಕೇನು ಮಾಡಬೇಕೋ ಅದನ್ನು ಮಾಡಬೇಕೆಂಬುದು ನನ್ನ ಮನಸ್ಸಿನಲ್ಲಿದೆ, ಅದನ್ನು ನಾನು ಮಾಡುತ್ತೇನೆ.

ಶ್ರೀ ಕೆ.ಬಿ.ಕೋಳಿವಾಡ್(ರಾಣೆಬೆನ್ನೂರು): ರಾಜ್ಯದ ರೈತರ ಹಿತದೃಷ್ಟಿಯಿಂದ ಅತ್ಯಂತ ಸ್ವಾಗತಾರ್ಹವಾದ ಮಸೂದೆಯನ್ನು ತಂದಿದ್ದಾರೆ. ಇದಕ್ಕೆ ನಾವು ಸಂಪೂರ್ಣವಾಗಿ ಬೆಂಬಲಿಸುತ್ತೇವೆ. ರೈತ ತನಗೆ ಕಷ್ಟ ಬಂದಾಗ ಗಿಡಗಳನ್ನು ಕಡಿದು ಮಾರಬೇಕೆಂಬ ಉದ್ದೇಶದಿಂದ ಅರಣ್ಯ ಇಲಾಖೆಗೆ ತಿಳಿಸಿದ ತಕ್ಷಣ, ನಿಯಮಗಳಲ್ಲಿ ಅಳವಡಿಸಿಕೊಂಡು ಅವನಿಗೆ ಅನುಕೂಲವಾಗುವಂತೆ ಒಂದೆರಡು ತಿಂಗಳೊಳಗೆ ಮುಗಿಸಿ, ಅವನಿಗೆ ಹಣ ಸಿಗುವ ರೂಪದಲ್ಲಿ ನಿಯಮಗಳನ್ನು ಜಾರಿಗೆ ತಂದರೆ ರೈತನಿಗೆ ಅನುಕೂಲವಾಗುತ್ತದೆ. ಇಲ್ಲದಿದ್ದರೆ, ಆ ನಿಯಮಗಳಲ್ಲಿ ಅನೇಕ ತರಹದ ಕಂಡೀಷನ್‌ಗಳನ್ನು ಹಾಕಿ, ಅಧಿಕಾರಿಗಳು ಒಂದಲ್ಲ ಒಂದು ರೀತಿಯಿಂದ ರೈತನನ್ನು ಹಿಂಸೆಪಡಿಸಲು ಆಗದಂತೆ ನಿಯಮಗಳನ್ನು ಜಾರಿಗೆ ತರುತ್ತೀರೆಂಬ ಭರವಸೆ ಇಟ್ಟು, ಮತ್ತೊಮ್ಮೆ ಈ ಮಸೂದೆಯನ್ನು ನಾನು ಸ್ವಾಗತಿಸುತ್ತೇನೆ.

ಶ್ರೀ ಕೆ.ಹೆಚ್.ರಂಗನಾಥ್: ನಾನು ಆಗಲೇ ಉತ್ತರಿಸಿದ್ದೇನೆ. ತೊಂದರೆಯಾಗದ ಹಾಗೆ ನೋಡಿಕೊಳ್ಳುತ್ತೇನೆ.

ಶ್ರೀ ಸಿ.ಭೈರೇಗೌಡ(ವೇಮಗಲ್): ಮಾನ್ಯ ಅಧ್ಯಕ್ಷರೆ, ಈ ವಿಚಾರದಲ್ಲಿ ನನಗೆ ಅನುಭವ ಇದೆ, ಈ ಸರ್ಕಾರ ಉತ್ತಮವಾದ ಕೆಲಸವನ್ನು ಮಾಡತಕ್ಕಂಥ ಪ್ರಯತ್ನ ಮಾನ್ಯ ರಂಗನಾಥರವರು ಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಆಗಿದೆ, ಇದಕ್ಕೆ ವೈಯಕ್ತಿಕವಾಗಿ ಮತ್ತು ನಮ್ಮ ಪಕ್ಷದ ಪರವಾಗಿ ಈ ಮಸೂದೆಯನ್ನು ಸ್ವಾಗತಿಸುವ ಮುಖೇನ ಅವರನ್ನು ಅಭಿನಂದಿಸುತ್ತೇನೆ. ಒಬ್ಬ ರೈತ ತನ್ನ ಜಮೀನಿನಲ್ಲಿ ಏನು ಬೆಳೆಯುತ್ತಾನೆ ಅದರ ಪೂರ್ಣ ಹಕ್ಕು ಅವನಿಗಿರತಕ್ಕಂಥಾದ್ದು ಸ್ವಾಭಾವಿಕ ನ್ಯಾಯ. ಆದರೆ ಇದಕ್ಕೆ ವ್ಯತಿರಿಕ್ತವಾಗಿ ರೈತನ ಜಮೀನಿನಲ್ಲಿರುವ ಖನಿಜ ಪದಾರ್ಥಗಳು ಇವೆಲ್ಲವೂ ಸರ್ಕಾರದ ಸ್ವತ್ತು ಆಗುತ್ತವೆ. ಭೂಮಿಯಲ್ಲಿ ಏನಾದರೂ ನಿಧಿ ಸಿಕ್ಕಿದರೆ ಅದೂ ಸಹ ಸರ್ಕಾರದ ಸ್ವತ್ತು ಎಂಬುದಾಗಿ ಕಾನೂನಿನಲ್ಲಿದೆ. ಈ ರೀತಿಯಾಗಿ ಸ್ವಾಭಾವಿಕವಾಗಿ ರೈತ

ಬೆಳೆಸಿರುವಂಥ ಗಂಧದ ಮರಗಳಾಗಲಿ, ಕೆಲವು ಪ್ರೊಟೆಕ್ಟೆಡ್ ಮರಗಳಾಗಲಿ, ಇವುಗಳನ್ನು ಕೂಡ ಅದರ ಜೊತೆಯಲ್ಲಿ ಸೇರಿಸಿದ್ದಾರೆ. ಉದಾಹರಣೆಗೆ ಹೇಳುವುದಾದರೆ ರೋಜ್‌ವುಡ್ ಆಗಲಿ, ಇಂಥವೆಲ್ಲಾವನ್ನೂ ಕೂಡ ರೈತನ ಸ್ವತ್ತು ಅಲ್ಲ ಸರ್ಕಾರದ ಸ್ವತ್ತು ಎನ್ನುವ ಕಾನೂನು ಇದೆ. ಇಂಥ ಮರಗಳನ್ನು ರೈತನ ಜಮೀನಿನಲ್ಲಿ ಬೆಳೆದರೂ ಸಹ ಅವನಿಗೆ ಬಿಡಿಗಾಸನ್ನು ಕೊಡದೆ ಸಂಪೂರ್ಣವಾಗಿ ಸರ್ಕಾರವೇ ತೆಗೆದುಕೊಳ್ಳತಕ್ಕಂಥ ವ್ಯವಸ್ಥೆಯಿದೆ. ಇದು ಇಂಗ್ಲೀಷರ ಕಾಲದಲ್ಲಿ ಮಾಡಿದಂಥ ಕಾನೂನು. ಇದನ್ನೇ ನಾವು ಇಲ್ಲಿಯವರೆಗೆ ಮುಂದುವರಿಸಿಕೊಂಡು ಬಂದಿದ್ದೇವೆ. ಇದನ್ನೇ ನಾವು ಮುಂದುವರಿಸಿಕೊಂಡು ಹೋದರೆ, ಇನ್ನು ಕೆಲವೇ ವರ್ಷಗಳಲ್ಲಿ, ಗಂಧ ಅಂದರೆ ಏನೆಂದು ಮಕ್ಕಳಿಗೆ ಅವರ ಪಠ್ಯಪುಸ್ತಕದಲ್ಲಿ ಚಿತ್ರ ಬರೆದು ತೋರಿಸಬೇಕಾಗುತ್ತದೆ ಹಾಗೂ ಮ್ಯೂಸಿಯಂನಲ್ಲಿಟ್ಟು ತೋರಿಸಬೇಕಾದ ಅನಿವಾರ್ಯ ಪರಿಸ್ಥಿತಿ ಬರುತ್ತದೆ. ಏಕೆಂದರೆ, ಇವತ್ತು ಎಂತಹ ಕಾವಲು ಇದ್ದರೂ ಕೂಡ ಗಂಧ ಉಳಿಯತಕ್ಕಂಥ ಪ್ರಸಂಗವಿಲ್ಲ. ಉದಾಹರಣೆಗೆ ಹೇಳುವುದಾದರೆ, ಹಿಂದೆ ಮುಖ್ಯಮಂತ್ರಿಗಳಾಗಿದ್ದ ಸನ್ಮಾನ್ಯ ಶ್ರೀ ಜೆ.ಹೆಚ್.ಪಟೇಲ್‌ರವರು ಈಗಿರುವ ''ಅನುಗ್ರಹ'' ಪಕ್ಕದಲ್ಲಿ ಇದ್ದಂಥ ಸಂದರ್ಭದಲ್ಲಿ ಏನಾಯಿತು ಎಂಬುದನ್ನು ಹೇಳುತ್ತೇನೆ. ಅವರ ಮನೆ ಸುತ್ತೂಲೂ ಪೋಲೀಸರ ಕಾವಲು ಇದ್ದೇ ಇರುತ್ತದೆ, ಅದರ ಎದುರುಗಡೆ ಗಾಲ್ಫ್‌ಕೋರ್ಟ್ ಇದೆ, ಅದರ ಮಧ್ಯದಲ್ಲಿರುವ ರಸ್ತೆಯಲ್ಲಿ ಪೋಲೀಸ್ ವ್ಯಾನ್ ನಿಂತಿದೆ, ಇದರಿಂದ ಸುಮಾರು 15-20 ಅಡಿ ದೂರದಲ್ಲಿರುವ ಆ ಗಾಲ್ಫ್‌ಕೋರ್ಟಿನಲ್ಲಿರುವ ಗಂಧದ ಮರವನ್ನು ಕಳ್ಳತನ ಮಾಡಲಾಯಿತು. ತಮಗೆ ಗೊತ್ತಿರುವಂತೆ ನಾನು ಬೆಳಿಗ್ಗೆ ಅಲ್ಲಿ ವಾಯುವಿಹಾರಕ್ಕೆ ಹೋದಂಥ ಸಂದರ್ಭದಲ್ಲಿ ಅಲ್ಲಿ ಆಗಿರುವ ಅಚಾತುರ್ಯವನ್ನು ನೋಡಿ ನಾನು ತಲೆತಗ್ಗಿಸಬೇಕಾದ ಅನಿವಾರ್ಯತೆ ಉಂಟಾಯಿತು, ಏಕೆಂದರೆ ನಾನು ಆಗ ಮಂತ್ರಿಯಾಗಿದ್ದು ಸರ್ಕಾರದ ಒಂದು ಅಂಗವಾಗಿರುವ ಕಾರಣದಿಂದ, ನಾನು ತಲೆತಗ್ಗಿಸಬೇಕಾಯಿತು. ಅಲ್ಲಿ ಪೋಲೀಸ್ ವ್ಯಾನ್ ಹತ್ತಿರದಲ್ಲಿದ್ದರೂ ಕಳ್ಳರು ಆ ಗಂಧದ ಮರವನ್ನು ಕತ್ತರಿಸಿ ತೆಗೆದುಕೊಂಡು ಹೋಗಿದ್ದರು. ಅಂದರೆ, ಕಳ್ಳರು ಎಷ್ಟು ಚಾಣಾಕ್ಷತನದಿಂದ ಈ ಗಂಧದ ಮರಗಳನ್ನು ಕಳ್ಳತನ ಮಾಡುತ್ತಾರೆ ಎನ್ನುವುದಕ್ಕೆ ಈ ಉದಾಹರಣೆಯನ್ನು ತಮಗೆ ಇಲ್ಲಿ ಹೇಳಬೇಕಾಯಿತು. ನಾನು ಏಕೆ ಇದನ್ನು ಹೇಳಿದೆನೆಂದರೆ, ಇವತ್ತು ರೈತನಿಗೆ ಇದನ್ನು ಬೆಳೆಸುವುದಕ್ಕೆ ಇಷ್ಟವಿಲ್ಲ, ಅನೇಕ ಕಡೆ ಹಿಂದೆ ಗಂಧದ ಮರಗಳನ್ನು ಬೆಳೆಸಿರುವವರ ಮೇಲೆ ಕೇಸ್ ದಾಖಲು ಮಾಡಿದ್ದಾರೆ. ಕಾನೂನು ಪ್ರಕಾರ ಗಂಧದ ಮರವನ್ನು ರಕ್ಷಣೆ ಮಾಡುವಂಥ ಜವಾಬ್ದಾರಿ ಆ ರೈತನ ಮೇಲೆ ಇತ್ತು. ಇಷ್ಟೆಲ್ಲಾ ಇದ್ದರೂ ಕೂಡ ರೈತನಿಗೆ ಬಿಡಿಕಾಸು ಹೋಗುತ್ತಿಲ್ಲ. ಮಾನ್ಯ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದ ಕಾಲದಲ್ಲಿ ಅದಕ್ಕೆ ಶೇಕಡ 50ರಷ್ಟು ಕೊಡಬೇಕು ಎಂದು ಮೊದಲನೇ ಸಾರಿ ಕಾನೂನು ತಂದರು. ಆಗ ನಮ್ಮ ಜಮೀನಿನಲ್ಲಿ ಬೆಳೆದಿರುವ ಗಂಧವನ್ನು ನಾವೇ ಕಡಿದು ಬಹಳ ಉಸ್ತುವಾರಿಯಿಂದ ಮೈಸೂರಿಗೆ ತೆಗೆದುಕೊಂಡು ಹೋಗಿ ಕೊಟ್ಟಾಗ ಸುಮಾರು 60, 70 ಸಾವಿರ ರೂಪಾಯಿ ಹಣ ಬಂತು. ಇದನ್ನು ರಕ್ಷಣೆ ಮಾಡಬೇಕು ಎನ್ನುವ ಕಲ್ಪನೆ ಈ ಮೊದಲೇ ಸರ್ಕಾರಗಳಿಗೆ ಇದ್ದಿದ್ದರೆ, ಇದನ್ನು ರೈತರು ಎಷ್ಟೇ ಕಷ್ಟಪಟ್ಟರೂ ಈ ಗಂಧವನ್ನು ರಕ್ಷಣೆ ಮಾಡುತ್ತಿದ್ದರು. ಈ ಕಾನೂನು ಇಲ್ಲದಿರುವುದರಿಂದ ರೈತರು ರಕ್ಷಣೆ

ಮಾಡುತ್ತಿಲ್ಲ. ಇವತ್ತು ಈ ಕಾನೂನು ಮುಖೇನ ರೈತರು ಗಂಧದ ಮರಗಳನ್ನು ಬೆಳೆಸುವುದರ ಜೊತೆಗೆ ಅದರ ಪೂರ್ತಿ ಹಣ ಸಂದಾಯವಾಗುವ ರೀತಿಯಲ್ಲಿ, ಮತ್ತು ಆ ಮರವನ್ನು ರಕ್ಷಣೆ ಮಾಡುವ ಜವಾಬ್ದಾರಿ ಹಾಗೂ ರೈತನಿಗೆ ಅದರ ಪೂರ್ಣ ಹಕ್ಕನ್ನು ಕೊಡತಕ್ಕಂಥ ಸ್ವಾಗತಾರ್ಹವಾದ ಕ್ರಮ ಈಗಲಾದರೂ ಬಂದಿದೆ, ಇದರಿಂದ ನನಗೆ ಬಹಳ ಸಂತೋಷವಾಗುತ್ತಿದೆ. ನಾವೆಲ್ಲಾ ಪ್ರಾಥಮಿಕ ಶಾಲೆಯಲ್ಲಿ ಓದುತ್ತಿರತಕ್ಕಂಥ ಸಂದರ್ಭದಲ್ಲಿ ಪಂಜೆಮಂಗೇಶರಾಯರವರು ಬರೆದಿರುವ ಪದ್ಯವನ್ನು ನಾವು ಓದುತ್ತಿದ್ದೆವು,, ಮೈಸೂರಿನ ಬಗ್ಗೆ ಹೇಳುತ್ತಾ,

ನಾಲ್ಮಡಿ ಕೃಷ್ಣನ ಮೈಸೂರು ಇದು,
ಗಂಧದ ಬೀಡಿದು ಮೈಸೂರು,

ಈ ಪದ್ಯವನ್ನು ನಾವು ಆಗ ಬಾಯಿಪಾಠ ಮಾಡಿಕೊಂಡು ಹೇಳುತ್ತಿದ್ದೆವು, ಅದನ್ನು ಇನ್ನು ಮುಂದೆ ಕೂಡ,

ಗಂಧದ ಗೂಡು ಇದು ಮೈಸೂರು
ಗಂಧದ ಗೂಡು ಇದು ಕರ್ನಾಟಕ

ಎನ್ನುವುದು ಈ ಕಾನೂನಿಂದ ಅದು ಸಾಧ್ಯವಾಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ರೈತರಿಗೆ ಇದರಲ್ಲಿ ಸಬ್ಸಿಡಿ ಕೊಡುವುದಕ್ಕೆ ಸಾಧ್ಯವಾದರೆ ಅದನ್ನು ಕೊಟ್ಟು ನಶಿಸಿ ಹೋಗುತ್ತಿರುವ ಈ ಗಂಧದ ಸಂಪತ್ತು ಇವತ್ತು ಏನು ಎಕ್ಸ್‌ಪಿಂಕ್ ಆಗುತ್ತಿದೆ, ಇದಕ್ಕೆ ಅವಕಾಶ ಇಲ್ಲದ ರೀತಿಯಲ್ಲಿ ಈ ಮಸೂದೆಯನ್ನು ತಂದಿದ್ದಾರೆ, ಹೀಗಾಗಿ ನಾನು ಪುನಃ ಇದನ್ನು ಸ್ವಾಗತಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ.ಹೆಚ್.ರಂಗನಾಥ್(ಅರಣ್ಯ ಸಚಿವರು): ಅವರಿಗೆ ಪೂರ್ಣ ಹಕ್ಕು ದೊರೆಯುತ್ತಿದೆ ಎನ್ನುವ ಮಾತನ್ನು ನಾನು ಈಗಾಗಲೇ ಹೇಳಿದ್ದೇನೆ. ಅದನ್ನು ಕಡಿದು ಕೋಠಿಗೆ ಸಾಗಾಣಿ ಮಾಡುವ ಖರ್ಚನ್ನು ಮಾತ್ರ ಸರ್ಕಾರ ಉಳಿಸಿಕೊಂಡು, ಮಿಕ್ಕಿದ್ದನ್ನು ಪೂರ್ತಿ ಅವರಿಗೆ ಕೊಡುತ್ತದೆ.

ಶ್ರೀ ಕೆ.ಬಿ.ಮಲ್ಲಿಕಾರ್ಜುನ (ಬೀರೂರು): ಮಾನ್ಯ ಅಧ್ಯಕ್ಷರೆ, ಇವತ್ತು ಬಹಳ ಒಳ್ಳೆಯ ವಿಧೇಯಕವನ್ನು ಇವರು ತಂದಿದ್ದಾರೆ, ಇದಕ್ಕೆ ನಾವು ಸ್ವಾಗತಿಸಲೇಬೇಕಾಗಿದೆ. ಮಾನ್ಯ ಅರಣ್ಯ ಸಚಿವರಲ್ಲಿ ನನ್ನ ಮನವಿ ಏನೆಂದರೆ, ಮರಕ್ಕೆ ಯಾವ ರೀತಿ ಹಾನಿಯಾಗುತ್ತದೆ ಎನ್ನುವುದಕ್ಕೆ ಇಲ್ಲಿ ವಿವರಣೆ ಇದೆ, ಪುಟ 11ರಲ್ಲಿ ''ಹಾನಿ'' ಎಂಬುದರಲ್ಲಿ ಮರಗಳಿಗೆ ಪಸ್ತುತಃ ಹಾನಿ ಆಗಿ ಪರಿಣಮಿಸುವ ಅವುಗಳ ರೆಂಬೆಗಳನ್ನು ಕತ್ತರಿಸುವುದೂ ಸೇರಿದೆ ಎಂದು ಇದೆ. ಗಂಧದ ಮರ ಬಹಳ ಸೂಕ್ಷ್ಮವಾಗಿರತಕ್ಕಂಥ ಮರ, ಮರದ ತೊಗಟೆಯನ್ನು ತೆಗೆದರೂ ಸಹ ಮರ

ಹಾನಿಯಾಗುತ್ತದೆ. ಆದ್ದರಿಂದ, ಮರದ ತೊಗಟೆಯನ್ನೂ ಕೂಡ ತೆಗೆಯಬಾರದು ಎಂದು ಸೇರಿಸಬೇಕು. ಇಲ್ಲದಿದ್ದರೆ, ಯಾರಿಗೆ ಮರ ಬೇಕಾಗಿರುತ್ತದೆ ಅವರು ಆ ಮರದ ತೊಗಟೆಯನ್ನು ತೆಗೆದು, ಮರ ಹಾನಿಯಾಗಿದೆ ಎಂದು ಡಿಕ್ಲೇರೇಷನ್ ಕೊಡುವುದು ಆಗುತ್ತದೆ, ಮರ ಇನ್ನೂ ಬಲಿತಿರುವುದಿಲ್ಲ, ಇದರಿಂದಾಗಿ ಸರ್ಕಾರಕ್ಕೆ ಮತ್ತು ರೈತರಿಗೆ ಹಾನಿಯಾಗುವುದರಿಂದ, ಇದನ್ನು ಸೇರಿಸಬೇಕೆಂದು ನನ್ನ ಮನವಿ. ಎರಡನೆಯದಾಗಿ, ಈ ಗಂಧದ ಮರ ಏನಿದೆ ಇದು ಪ್ಯಾರಾಸೈಟ್. ಬೇರೆ ಮರದ ಬೇರಿನಿಂದ ನೀರನ್ನು ಹೀರಿಕೊಂಡು ಅದು ಬದುಕುತ್ತದೆ. ಅದಕ್ಕೋಸ್ಕರ ಯಾವುದಾದರೊಂದು ಕಾನೂನಿನ ಚೌಕಟ್ಟಿನೊಳಗೆ, ಆ ಗಂಧದ ಮರದ ಸುತ್ತ 15-20 ಅಡಿ ದೂರದಲ್ಲಿರುವ ಯಾವುದೇ ಮರವನ್ನು ಹಾನಿ ಮಾಡಬಾರದು ಎನ್ನುವುದನ್ನು ಸೇರಿಸಬೇಕಾಗುತ್ತದೆ. ಏಕೆಂದರೆ, ಇಲ್ಲೊಂದು ಗಂಧದ ಮರ ಇದ್ದರೆ ಅದರ ಪಕ್ಕದಲ್ಲಿರುವ ಬೇರೆ ಮರವನ್ನು ಕಡಿದರೂ ಗಂಧದ ಮರ ಒಣಗಿಹೋಗುತ್ತದೆ. ಅದಕ್ಕೋಸ್ಕರ, ಗಂಧದ ಮರದ ಸುತ್ತ ಇರುವ ಕನಿಷ್ಠ 15-20 ಅಡಿ ದೂರದಲ್ಲಿರುವ ಯಾವುದೇ ಮರಗಳನ್ನು ಹಾನಿ ಮಾಡಬಾರದು ಎಂದು ಸೇರಿಸಬೇಕು ಎಂಬುದಾಗಿ ನಾನು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ.ಎಚ್.ರಂಗನಾಥ್: ಮಾನ್ಯ ಅಧ್ಯಕ್ಷರೆ, ಇವತ್ತಿನದಿವಸ ಯಾರು ಗಂಧದ ಮರಗಳನ್ನು ಬೆಳೆಯುತ್ತಾರೆಯೋ ಅವರೇ ಅವುಗಳ ರಕ್ಷಣೆ ಮಾಡಿಕೊಳ್ಳಬೇಕಾಗುತ್ತದೆ. ಸದರಿ ಕಾನೂನು ಬಂದ ಮೇಲೆ ಸರ್ಕಾರಿ ಮಾಲೀಕತ್ವ ಇರುವುದಿಲ್ಲ. ಆದರೆ ಇಲ್ಲಿಯವರೆಗೆ ಈ ಪ್ರಾಪರ್ಟಿ ಸರ್ಕಾರದ ಒಡೆತನದಲ್ಲಿತ್ತು. ಆದರೆ ಈ ಕಾನೂನು ಬಂದ ಮೇಲೆ ಸರ್ಕಾರದ ಒಡೆತನ ಇಲ್ಲಿ ಬರುವುದಿಲ್ಲ, ಮಾನ್ಯ ಸದಸ್ಯರು ಈಗಾಗಲೇ ಹೇಳಿದ ಹಾಗೆ ಗಂಧದ ಮರದ ಸುತ್ತಲೂ ಸುಮಾರು 15 ಅಡಿ ವಿಸ್ತೀರ್ಣದವರೆಗೆ ಇರತಕ್ಕಂಥ ಮರಗಳನ್ನು ಹಾಗೆ ಬಿಡುವುದರಿಂದ ಗಂಧದ ಮರಕ್ಕೆ ಹಾನಿ ಆಗುವುದಿಲ್ಲವೆಂದು ಕೆಲವರಿಗೆ ಗೊತ್ತಿಲ್ಲದೆ ಇರಬಹುದು. ಆದ್ದರಿಂದ ಇದರ ಬಗ್ಗೆ ತಿಳುವಳಿಕೆ ಕೊಡತಕ್ಕಂಥ ಕೆಲಸವನ್ನು ಮಾಡೋಣ. ಹಾಗೆಯೇ ಏನೇನು ರೂಲ್ಸ್‌ನಲ್ಲಿ ಬದಲಾವಣೆ ಮಾಡಬೇಕೋ ಅದನ್ನು ಮಾಡೋಣವೆಂದು ನಾನು ಈಗಾಗಲೇ ಹೇಳಿದ್ದೇನೆ. ಆದ್ದರಿಂದ ಇದು ಜಾರಿಗೆ ಬಂದ ಮೇಲೆ ಏನೇನು ಸಾಧಕಬಾಧಕಗಳು ಆಗುತ್ತವೆ ಎನ್ನತಕ್ಕಂಥಾದ್ದನ್ನು ಸರ್ಕಾರ ಪರಿಗಣಿಸಿ ತತ್‌ಕ್ಷಣ ಅನುಕೂಲ ಮಾಡಿಕೊಡತಕ್ಕಂಥ ಕೆಲಸವನ್ನು ಖಂಡಿತ ಮಾಡಿಕೊಡುತ್ತೇವೆ. ಹತ್ತಿರ ಇರತಕ್ಕಂಥ ಅರಣ್ಯ ಇಲಾಖೆಯ ಅಧಿಕಾರಿಗೆ ಮತ್ತು ಪೋಲೀಸ್ ಅಧಿಕಾರಿಗಳಿಗೆ ಇದರ ಬಗ್ಗೆ ವರದಿ ಕೊಡತಕ್ಕಂಥಾದ್ದು ಆತನ ಜವಾಬ್ದಾರಿಯಾಗಿರುತ್ತದೆ. ಆದರೆ ಹಿಂದೆ ಇದ್ದಂಥ ಯಾವುದೇ ತೊಂದರೆಗಳು ಆತನಿಗೆ ಈಗ ಆಗುವುದಿಲ್ಲ. ಹಾಗೆಯೇ ಮಾನ್ಯ ಸದಸ್ಯರು ''ಹಾನಿ'' ಎಂಬ ಪದದ ಬಗ್ಗೆ ಪ್ರಸ್ತಾಪ ಮಾಡಿದರು. ಆದರೆ ಇಂಗ್ಲೀಷ್‌ನಲ್ಲಿ ಇಂಜ್ಯುರಿ ಎಂದು ಇರುವುದರಿಂದ ವಿವರಣೆಯಲ್ಲಿಯೂ ಕೂಡ ''ಹಾನಿ'' ಎನ್ನತಕ್ಕಂಥ ಪದವನ್ನು ಹಾಕಿದ್ದಾರೆ. ಇದು ಈಗಾಗಲೇ ಇರತಕ್ಕಂಥ ಕಾನೂನಿನಲ್ಲಿ ಮಾನ್ಯ ಸದಸ್ಯರು ಹೇಳಿರತಕ್ಕಂಥ ಎಲ್ಲಾ ಅಂಶಗಳು ಇವೆ.

ಶ್ರೀ ಕೆ.ಎಂ.ಕೃಷ್ಣಮೂರ್ತಿ(ಕಡೂರು): ಮಾನ್ಯ ಅಧ್ಯಕ್ಷರೆ, ಮಾನ್ಯ ಅರಣ್ಯ ಸಚಿವರು ಒಂದು ಉತ್ತಮವಾದ ಕಾಯಿದೆಯನ್ನು ತಂದಿದ್ದಾರೆ. ಜಮೀನಿನಲ್ಲಿ ಶ್ರೀಗಂಧದ ಮರ ಇದ್ದರೆ ಜಮೀನಿನ ಮಾಲೀಕ ಅದನ್ನು ಮಾರುವುದಕ್ಕೆ ಹಕ್ಕು ಇದೆ ಎಂದು ಈ ಮಸೂದೆಯಲ್ಲಿ ಸೂಚಿಸಲಾಗಿದೆ. ಈ ಸಂದರ್ಭದಲ್ಲಿ ನಾನು ಮಾನ್ಯ ಅರಣ್ಯ ಸಚಿವರ ಗಮನ ಸೆಳೆಯುವುದೇನೆಂದರೆ, ಕಳೆದ 10 ವರ್ಷಗಳಿಂದ ರೈತರ ಜಮೀನಿನಲ್ಲಿ ಸಾಗುವಾನಿ ಮರಗಳನ್ನು ಬೆಳೆಯುತ್ತಿದ್ದಾರೆ. ಹಾಗೆಯೇ ಇವತ್ತಿನ ದಿವಸ ಹೊಲದ ಬದುಗಳ ಮೇಲೆ ಶ್ರೀಗಂಧದ ಮರಗಳನ್ನು ಬೆಳೆಯುವುದಕ್ಕೆ ಅವಕಾಶ ಕೊಟ್ಟು ಈತನ ಹೊಲದಲ್ಲಿ ಎಷ್ಟು ಗಂಧದ ಮರಗಳನ್ನು ಬೆಳೆಯಲಾಗಿದೆ ಎನ್ನತಕ್ಕಂಥಾದ್ದನ್ನು ಆತನ ಆರ್.ಟಿ.ಸಿ. ಪುಸ್ತಕದಲ್ಲಿ ನಮೂದು ಮಾಡಲಿಕ್ಕೆ ಸಾಧ್ಯವಿದ್ದರೆ ಇಲಾಖಾಧಿಕಾರಿಗಳಿಗೆ ಈ ಕೆಲಸ ಮಾಡುವುದಕ್ಕೆ ತಾವು ನಿರ್ದೇಶನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಎಲ್ಲರೂ ಗಂಧದ ಮರಗಳನ್ನು ಬೆಳೆಯುವುದಕ್ಕೆ ಅವಕಾಶ ಕೊಡುವುದರಿಂದ ಶ್ರೀಗಂಧದ ನಾಡು ಎಂದು ಏನು ಕರೆಯುತ್ತಿದ್ದಾರೆಯೋ ಅದು ನಿಜವಾಗತಕ್ಕಂಥ ಕಾಲ ಬರುತ್ತದೆ. ಹಾಗೆಯೇ ಲಾಭದಾಯಕವಾದ ವ್ಯವಸಾಯವೂ ಕೂಡ ಆಗುತ್ತದೆ. ಆದ್ದರಿಂದ ಮಾನ್ಯ ಸಚಿವರು ಇದನ್ನು ತರಲಿಕ್ಕೆ ಪ್ರಯತ್ನ ಮಾಡುತ್ತಾರೆಯೇ ಎಂದು ತಮ್ಮ ಮುಖಾಂತರ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ(ಕೊಪ್ಪಳ): ಮಾನ್ಯ ಅಧ್ಯಕ್ಷರೆ, ಮಾನ್ಯ ಅರಣ್ಯ ಸಚಿವರಾಗಿರತಕ್ಕಂಥ ಶ್ರೀ ಕೆ.ಹೆಚ್.ರಂಗನಾಥ್‌ರವರು ತಂದಿರತಕ್ಕಂಥ ಈ ತಿದ್ದುಪಡಿಯನ್ನು ನಾನು ಸ್ವಾಗತ ಮಾಡುತ್ತೇನೆ. ಗಂಧದ ಮರವನ್ನು ಖಾಸಗಿಯಾಗಿ ಬೆಳೆಯುವುದಕ್ಕೆ ತಾವು ಅವಕಾಶ ಮಾಡಿಕೊಡುತ್ತಿದ್ದೀರಿ. ನಾವೂ ಕೂಡ ಗಂಧದ ಮರಗಳನ್ನು ಬೆಳೆಯಬೇಕೆಂಬ ಉದ್ದೇಶದಿಂದ ಅರಣ್ಯ ಇಲಾಖೆ ಅಧಿಕಾರಿಗಳನ್ನು ಭೇಟಿ ಮಾಡಿದ್ದೇವೆ. ನಾವು ಗಂಧದ ಪ್ಲಾಂಟ್ ಮಾಡುವುದಿಲ್ಲ, ಸೀಡ್ಸ್ ಕೊಡುತ್ತೇವೆ, ನೀವೇ ಸಸಿಗಳನ್ನು ಬೆಳೆಸಿಕೊಳ್ಳಬೇಕೆಂದು ಅರಣ್ಯ ಇಲಾಖೆಯ ಅಧಿಕಾರಿಗಳು ಹೇಳಿದರು. ಆದರೆ ಇದರ ಜರ್ಮಿನೇಷನ್ ತಂತ್ರಜ್ಞಾನ ರೈತರಿಗೆ ಅಷ್ಟೊಂದು ಗೊತ್ತಾಗುವುದಿಲ್ಲ. ಆದ್ದರಿಂದ ಅರಣ್ಯ ಇಲಾಖೆಯವರೇ ಮಾಡಿಕೊಡಬೇಕೆಂದು ತಾವು ಡೈರೆಕ್ಷನ್ ಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ನಮ್ಮ ರಾಜ್ಯದಲ್ಲಿ ಕೆಲವು ಕಡೆ ಧನವಂತರಿ ವನ ಮಾಡುವುದಕ್ಕೆ ರೈತರು ಮುಂದೆ ಬಂದಿದ್ದಾರೆ. ಆದ್ದರಿಂದ ಈ ಒಂದು ಕಾರ್ಯಕ್ರಮವನ್ನು ಮಾಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ.ಎಂ.ಕೃಷ್ಣಮೂರ್ತಿ(ಕಡೂರು): ಮಾನ್ಯ ಅಧ್ಯಕ್ಷರೆ, ಗಂಧದ ಸಸಿಗಳನ್ನು ನರ್ಸರಿಗಳಲ್ಲಿ ಬೆಳೆಯುವುದಕ್ಕೆ ಮಾನ್ಯ ಸಚಿವರು ಅವಕಾಶ ಮಾಡಿಕೊಡಬೇಕು. ಇವತ್ತಿನ ದಿವಸ ರೋಸ್‌ವುಡ್ ಮತ್ತು ಸಾಗುವಾನಿ ಸಸಿಗಳನ್ನು ನರ್ಸರಿಗಳಲ್ಲಿ ಕೊಡುತ್ತಾರೆ. ಅದೇ ರೀತಿ ಇದನ್ನು ಕೊಟ್ಟರೆ ರೈತರಿಗೆ ಅನುಕೂಲವಾಗುತ್ತದೆ. ಮಾನ್ಯ ಸದಸ್ಯರಾದ ಶ್ರೀ ಕರಡಿಸಂಗಣ್ಣನವರು ಹೇಳಿದ ಹಾಗೆ

ರೈತರು ಸರಿಯಾಗಿ ಜರ್ಮಿನೇಷನ್ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಕೆ.ಎಚ್.ರಂಗನಾಥ್: ಮಾನ್ಯ ಅಧ್ಯಕ್ಷರೆ, ಈ ಗಿಡ ಪರಾವಲಂಬಿ ಸ್ವಾವಲಂಬಿ ಅಲ್ಲ. ಆದ್ದರಿಂದ ಇದನ್ನು ಬೆಳೆಸುವುದಕ್ಕೆ ಎಷ್ಟರಮಟ್ಟಿಗೆ ಸಾಧ್ಯವಿದೆಯೋ ಅದರ ಬಗ್ಗೆ ಯೋಚನೆ ಮಾಡೋಣ. ಇದನ್ನು ರಾಜ್ಯದ ಎಲ್ಲಾ ಜಮೀನುಗಳಲ್ಲಿ ಹಾಗೂ ಎಲ್ಲಾ ಭಾಗಗಳಲ್ಲಿ ಬೆಳೆಯಲಿಕ್ಕೆ ಆಗುತ್ತದೆ ಎಂದು ತಾವು ತಿಳಿದುಕೊಳ್ಳಬಾರದು. ಹಾಗೆಯೇ ಇದು ಬಂದ ನಂತರ ಶ್ರೀಮಂತರಾಗುತ್ತೇವೆ ಎಂದೂ ಸಹ ತಿಳಿದುಕೊಳ್ಳಬಾರದು. ಒಳಗಡೆಗೆ ಕಪ್ಪುಕೆಚ್ಚು ಇರುತ್ತದೆ ಅದು ಸರಿಯಾಗಿ ಬಂದು ಗಂಧದ ಮರದಲ್ಲಿ ಎಣ್ಣೆ ಬರಬೇಕಾದರೆ ಸುಮಾರು 30 ವರ್ಷಗಳವರೆಗೆ ಕಾಯಬೇಕಾಗುತ್ತದೆ. ಇದು ಪ್ಯಾರಾಸಿಟಕ್ ಪ್ಲಾಂಟ್ ಆಗಿರುವುದರಿಂದ ಯಾವ ಹವಾಗುಣದಲ್ಲಿ ಮತ್ತು ಯಾವ ಮಣ್ಣಿನಲ್ಲಿ ಬೆಳೆಯುವುದಕ್ಕೆ ಅನುಕೂಲವಾಗುತ್ತದೆ ಎನ್ನತಕ್ಕಂಥಾದ್ದನ್ನು ನಾನು ತಿಳಿದುಕೊಳ್ಳುತ್ತೇನೆ. ಇದರ ಬಗ್ಗೆ ನನಗೂ ಕೂಡ ಹೆಚ್ಚಿನ ಮಾಹಿತಿ ಗೊತ್ತಿಲ್ಲ. ಒಂದು ವೇಳೆ ಸಹಾಯ ಮಾಡುವಂಥ ಪರಿಸ್ಥಿತಿ ಇದ್ದರೆ ಖಂಡಿತ ಸಹಾಯ ಮಾಡೋಣ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

''ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2001ನೇ ಸಾಲಿನ ಕರ್ನಾಟಕ ಅರಣ್ಯ(ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 8ರವರೆಗೆ

ಅಧ್ಯಕ್ಷರು: ''ಖಂಡ 2 ರಿಂದ 8ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 8ರವರೆಗೆ, ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

''ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ

ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವನ ಅಂಗೀಕಾರ

ಶ್ರೀ ಕೆ.ಹೆಚ್.ರಂಗನಾಥ್(ಅರಣ್ಯ ಸಚಿವರು): ಮಾನ್ಯ ಅಧ್ಯಕ್ಷರೆ, ''ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2001ನೇ ಸಾಲಿನ ಕರ್ನಾಟಕ ಅರಣ್ಯ(ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.''

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

''ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2001ನೇ ಸಾಲಿನ ಕರ್ನಾಟಕ ಅರಣ್ಯ(ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

(iii) ಕರ್ನಾಟಕ ಪಂಚಾಯತ್ ರಾಜ್(ಮೂರನೇ ತಿದ್ದುಪಡಿ) ವಿಧೇಯಕ, 2000.

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಂ.ದಿವಾಕರಬಾಬು(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ರಾಜ್ಯ ಸಚಿವರು), (ಶ್ರೀ ಎಂ.ವೈ.ಘೋರ್ಪಡೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಪರವಾಗಿ) ಮಾನ್ಯ ಅಧ್ಯಕ್ಷರೆ, 2000ರ ಕರ್ನಾಟಕ ಪಂಚಾಯತ್ ರಾಜ್(ಮೂರನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಎಂ.ದಿವಾಕರಬಾಬು(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ರಾಜ್ಯ ಸಚಿವರು): ಸನ್ಮಾನ್ಯ ಅಧ್ಯಕ್ಷರೆ, ಬಾಂಡೆಡ್ ಲೇಬರ್ ಆಕ್ಟ್ 1976ರಲ್ಲಿ ಜಾರಿಗೆ ಬಂದಿದೆ. ಈ ಕಾನೂನು ಬಂದ ಮೇಲೆ ಸುಮಾರು 61,774 ಬಾಂಡೆಡ್ ಲೇಬರ್‌ಗಳನ್ನು ನಾವು ಗುರುತು ಮಾಡಿ ಇವರನ್ನು ಈ ಒಂದು ಪದ್ಧತಿಯಿಂದ ರಿಲೀಸ್ ಮಾಡಿಸಿದ್ದೇವೆ. ಇದಾದ ಮೇಲೆ ರೀಸೆಂಟ್ ಆಗಿ ಮಂಡ್ಯ ಜಿಲ್ಲೆಯಲ್ಲಿ ಇರತಕ್ಕಂಥ ಹಂಗರಹಳ್ಳಿಯಲ್ಲಿ ಈ ಒಂದು ಬಾಂಡೆಡ್ ಲೇಬರ್ ಕಂಡು ಬಂದಿತ್ತು. ಇವತ್ತಿನ ದಿವಸ ಜೀತದಾಳು ಪದ್ಧತಿಯನ್ನು ನಿರ್ಮೂಲನ